# ಕೌಂಡಿನ್ಯ



ಕೌಂಡಿನ್ಯ ಎಂಬ ಹೆಸರಿನಿಂದಲೇ ಪ್ರಸಿದ್ಧರಾಗಿರುವ ವೈ.ಎನ್. ನಾಗೇಶ್ ಅವರು ಹಾಸನ ಜಿಲ್ಲೆಯ ಹೊಳೆನರಸೀಪುರದವರು. ಮಾಂತ್ರಿಕ ಜಗತ್ತಿನ ಬೆಚ್ಚಿಬೀಳುವ ರೋಚಕ ಕಥನಗಳಿಗೆ ಅವರು ಹೆಸರುವಾಸಿ. ಕೌಂಡಿನ್ಯ ಅವರ ಕಾದಂಬರಿಯಲ್ಲಿನ ಮಾಂತ್ರಿಕರ ಹಾಗೆಯೇ ಅವರ ಅಕ್ಷರ ಜಗತ್ತಿನ ವೈವಿಧ್ಯವೂ ಓದುಗರನ್ನು ಸಮ್ಮೋಹಗೊಳಿಸಿ ಮೈಮರೆಸುವ ಮಾಂತ್ರಿಕ ಶಕ್ತಿ ಹೊಂದಿದೆ.

ಐತಿಹಾಸಿಕ, ಪೌರಾಣಿಕ ಕಾದಂಬರಿಗಳನ್ನೂ ಅವರು ಬರೆದಿದ್ದಾರೆ. ಇದುವರೆಗೆ 310 ಕಾದಂಬರಿಗಳನ್ನು ಬರೆದಿದ್ದಾರೆಂದರೆ ಅವರ ಕರ್ತೃತ್ವ ಶಕ್ತಿ ಎಷ್ಟು ಅಗಾಧವಾದ್ದು ಎಂಬುದು ಅರಿವಾಗುತ್ತದೆ. ಕನ್ನಡದ ಬಹುತೇಕ ವಾರ, ಪಾಕ್ಷಿಕ, ಮಾಸಿಕ ಪತ್ರಿಕೆಗಳಲ್ಲೆಲ್ಲ ಕೌಂಡಿನ್ಯರ ಕಾದಂಬರಿಗಳು ಪ್ರಕಟವಾಗಿದೆ. ಕಿರುತೆರೆ ಧಾರಾವಾಹಿಗೂ ಕಥೆ ಬರೆದಿರುವ ಅನುಭವ ಅವರಿಗಿದೆ.

ಇವರ ಕೃತಿಗಳಿಗೆ ಜ್ವಾಲನಯ್ಯ ಸ್ಮಾರಕ ಸಾಹಿತ್ಯಶ್ರೀ ಪ್ರಶಸ್ತಿ, ದಕ್ಷಿಣಕನ್ನಡ ಜಿಲ್ಲೆಯ ಶ್ರೇಷ್ಠ ಕಾದಂಬರಿಗಾರ ಪ್ರಶಸ್ತಿ, ಶಿವಮೊಗ್ಗ ಜಿಲ್ಲೆಯ ಸಹ್ಯಾದ್ರಿ ಶ್ರೀ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ. ವಾಮಾಚಾರವೆಂಬ ಅಧೋಲೋಕದ ಕ್ರೌರ್ಯಗಳನ್ನು ಬಿಚ್ಚಿಡುವ 'ಅಸತೋಮ' ಕಾದಂಬರಿ ಈ ವಾರದಿಂದ ಪ್ರಕಟವಾಗಲಿದೆ. ಬೆಚ್ಚಿ ಬೀಳಲು ಸಿದ್ಧರಾಗಿ...

ಮಾಂತ್ರಿಕನ ತಲೆಬುರುಡೆ. ಒಳಭಾಗದ ಚಾವಡಿಯಲ್ಲಿ ಭವ್ಯವಾದ ವಿಗ್ರಹ ಇದೆ. ಅದು ಕ್ಷುದ್ರ ಶಕ್ತಿಯ ವಿಗ್ರಹ. ಮೂರು ತಲೆಗಳು. ಆರು ಕೈಗಳು. ಭಯಂಕರ ಆಕಾರ. ತಲೆಬುರುಡೆಗಳ ಹಾರ. ರಕ್ತದ ತಿಲಕ ಹಣೆಯಲ್ಲಿ. ಈಗ ಈ ಮಾಂತ್ರಿಕ ರುದ್ರನಾಗ ವಿಗ್ರಹದ ಮುಂದೆ ನಿಂತುಕೊಂಡು ಪೂಜೆ ಮಾಡುತ್ತಿದ್ದಾನೆ. ರೂಮಿನ ತುಂಬಾ ಸಾಂಬ್ರಾಣಿಯ ಹೊಗೆ ತುಂಬಿಕೊಂಡಿದೆ. ದಾಸವಾಳ ಮತ್ತು ಚಂಡು ಹೂವುಗಳನ್ನು ರಕ್ತದಲ್ಲಿ ಅದ್ದಿ ಪೂಜೆ ಮಾಡುತ್ತಿದ್ದಾನೆ.

ಈ ಮಾಂತ್ರಿಕನ ಇಬ್ಬರು ಮಕ್ಕಳು ಮನೆಯಲ್ಲಿದ್ದರೂ ಸಹ ತುಟಿ ತೆರೆದಿಲ್ಲ. ಭಯ.... ತಂದೆಯ ಭಯ. ಅದರಲ್ಲಿಯೂ ಮಾಂತ್ರಿಕ ರಕ್ತ ಚಂಡಿಯನ್ನು ಪೂಜಿಸುವಾಗ ತೊಂದರೆಯಾಗಬಾರದು. ದಿನಕ್ಕೆ ಒಂದು ಗಂಟೆಯ ಕಾಲ ಪೂಜೆ ಮಾಡುತ್ತಾನೆ. ಕ್ಷುದ್ರಶಕ್ತಿ ಇರುವ ಈ ಮನೆಯಲ್ಲಿ ದೇವರಿಗೆ ಜಾಗವಿಲ್ಲ. ತಿನ್ನಲು, ಉಡಲು ಕೊರತೆ ಇರಲಿಲ್ಲ. ಶ್ರೀಮಂತಿಕೆ ತುಂಬಿ ತುಳುಕುತ್ತಿತ್ತು. ಆದರೆ ಸಮಾಜದಲ್ಲಿ ಇತರರಂತೆ ಬೆರೆತು ಬದುಕಲು ಆಗುತ್ತಿರಲಿಲ್ಲ. ಪೂಜೆ ಮುಗಿದ ಕೂಡಲೇ ರುದ್ರನಾಗ ದೇವ ಎಂದನು. ತಂದೆಯ ಕಡೆ ಇಬ್ಬರು ಮಕ್ಕಳು ಭಯದಿಂದ ನೋಡುತ್ತಿದ್ದಾರೆ. ಹೆಂಡತಿ ಅವನ ಆಜ್ಞೆಗಾಗಿ ಕಾಯುತ್ತಾ ನಿಂತಿದ್ದಾಳೆ. ಒಂದು ರೀತಿ ಉಸಿರು ಕಟ್ಟಿಸುವ ಸನ್ನಿವೇಶ, ನಿಶ್ಯಬ್ದತೆ ನೆಲೆಸಿದೆ. ಆ ನಿಶ್ಯಬ್ದತೆಯಲ್ಲಿ ಅಸಹಜತೆ ಇದೆ. ರುದ್ರನಾಗನಿಗೆ ಹೆಂಡತಿ ಮತ್ತು ಮಕ್ಕಳ ಮೇಲೆ ತುಂಬಾ ಪ್ರೀತಿ ಇತ್ತು. ಆದರೆ ಸಲಿಗೆ ನೀಡಿರಲಿಲ್ಲ. ಕಾಲೇಜಿನಲ್ಲಿ ಓದುತ್ತಿರುವ ಮಗ ಮತ್ತು ಮಗಳು. ಆರು ಗುಣಗಳನ್ನು ಮೈಗೂಡಿಸಿಕೊಂಡಿರುವ ಹೆಂಡತಿ. ಈ ರುದ್ರನಾಗನಿಗೆ ತಂಗಿ ಸಹ ಇದ್ದಾಳೆ. ಕಳೆದ ವರ್ಷ ತಾನೇ ನಗರದ ಗಂಡನ್ನು ಹುಡುಕಿ ಅದ್ದೂರಿಯಿಂದ ಮದುವೆ ಮಾಡಿದ್ದಾನೆ. ರುದ್ರನಾಗ ಈಗ ಅಡುಗೆ ಕೋಣೆಗೆ ಬಂದು ಚಾಪೆಯ ಮೇಲೆ ಕುಳಿತನು.

ಇಬ್ಬರು ಮಕ್ಕಳೂ ಕುಳಿತರು. ಬಿಸಿ ಬಿಸಿಯಾದ ರಾಗಿ ರೊಟ್ಟಿ, ಮೊಸರು, ಕಾಯಿಚಟ್ನಿ ಮತ್ತು ಮೆಣಸಿನಕಾಯಿ, ಬೆಣ್ಣೆ. ರುದ್ರನಾಗ ಮಕ್ಕಳ ಕಡೆ ಒಂದು ಸಲ ನೋಡಿ... ಚೆನ್ನಾಗಿ ಓದುತ್ತಿದ್ದೀರಾ? ಅವರಿಬ್ಬರೂ 'ಹ್ಞೂಂ...' ಎಂದರು. 'ಏನಾದರೂ ಬೇಕಿತ್ತ?'

'ಇಲ್ಲ. ಎಲ್ಲಾ ತಗೊಂಡಿದ್ದೇವೆ. ಸದ್ಯಕ್ಕೆ ಏನೂ ಬೇಡ' ಅಲ್ಲಿಗೆ ಮಾತು ಮುಗಿಯಿತು. ಸಂಸಾರಕ್ಕೆ ಏನಾದರೂ ಬೇಕಾದರೆ ಹೆಂಡತಿಯೇ ಕೇಳಬೇಕು.

ತನ್ನ ಇಬ್ಬರು ಮಕ್ಕಳಲ್ಲಿ ಒಬ್ಬನನ್ನು ಡಾಕ್ಟರ್ ಓದಿಸಬೇಕು. ಮಗಳನ್ನು ಎಂಜಿನಿಯರಿಂಗ್ ಓದಿಸಬೇಕೆಂಬ ಆಸೆ ಇದೆ. ಹೊರಗಿನಿಂದ 'ರುದ್ರ... ರುದ್ರಣ್ಣ...' ಎಂದು ಯಾರೋ ಕೂಗಿಕೊಂಡರು. ರುದ್ರನಾಗ ಹೆಂಡತಿಯ ಕಡೆ ನೋಡಿದರು. ಅವಳು ಹೊರಗೆ ಬಂದು 'ಜಗುಲಿಯ ಮೇಲೆ ಕೂತಿರಿ. ತಿಂಡಿ ತಿನ್ನುತ್ತಿದ್ದಾರೆ...' ಎಂದು ಹೇಳಿ ಹೋದಳು. ಪುನಃ ಒಳಗೆ ಬಂದಳು.

'ಯಾರು ಬಂದಿರೋದು?'

'ರಾಜಾರಾಯರು'

ರುದ್ರನಾಗನ ಮುಖ ಅರಳಿತು. ರಾಜಾರಾಯರು ಬಂದಿದ್ದಾರೆ ಅಂತ ಅಂದರೆ ಯಾರಿಗೋ ಭೂಮಿಯ ಮೇಲೆ ಋಣ ತೀರಿದೆ ಎಂದು ಅರ್ಥ. ರುದ್ರನಾಗನಿಗೆ ಒಳ್ಳೆಯ ಲಾಭ. ಹತ್ತು ನಿಮಿಷ ಕಳೆಯಿತು. ಮನೆಗೆ ಯಾರಾದರೂ ಬಂದಾಗ ಹೆಂಡತಿ, ಮಕ್ಕಳು ಹೊರಗೆ ಬರಕೂಡದು. ಅವರಿಬ್ಬರ ನಡುವೆ ಸಂಭಾಷಣೆ ನಡೆಯುತ್ತಿದೆ. ಅದು ಸಂಸಾರದವರಿಗೆ ಕೇಳಿಸುತ್ತಿದೆ.

ರುದ್ರನಾಗ 'ರಾಜಾರಾಯರೆ... ನೀವು ಇಲ್ಲಿಯತನಕ ಬಂದಿರಬೇಕಾದರೆ ಏನೋ ಕಾರಣವಿರಲೇಬೇಕು. ಅದೇನು ಅಂತ ಹೇಳಿ...'

ರಾಜಾರಾಯರು 'ನಿನಗೆ ಹಸಿರು ಔಷಧಿಯ ಪಂಡಿತ ರಾಮಯ್ಯ ಗೊತ್ತೆ?'

ರುದ್ರನಾಗ 'ಹಸಿರು ಗಿಡಗಳ ಪಂಡಿತ ರಾಮಯ್ಯ ಯಾರಿಗೆ ತಾನೇ ಗೊತ್ತಿಲ್ಲ. ಅಂದ ಹಾಗೆ ಅವನಿಂದ ಏನಾದರೂ ತೊಂದರೆ ಆಗಿರುವುದೆ?'

ರಾಜಾರಾಯರು 'ತೊಂದರೆ ಆಗಿರೋದು ರಾಮಯ್ಯನಿಂದ ಅಲ್ಲ ರುದ್ರ...'

'ಹಾಗಾದರೆ ಇನ್ಯಾರಿಂದ'

'ಅವನ ಇಬ್ಬರು ಮಕ್ಕಳಿಂದ'

ರುದ್ರನಾಗ ವಿಸ್ಮಯದಿಂದ ನೋಡಿದ.

ರಾಜಾರಾಯರು 'ರಾಮಯ್ಯನ ಮಗಳನ್ನು ನನ್ನ ಮಗ ಪ್ರೀತಿಸಿದ್ದಾನೆ. ಅವಳನ್ನೇ ಮದುವೆಯಾಗುತ್ತೇನೆ ಅಂತ ಹಟ ಮಾಡುತ್ತಿದ್ದಾನೆ. ಇನ್ನು ರಾಮಯ್ಯನ ಮಗ ನನ್ನ ಕೆಲವು ರಹಸ್ಯ ವ್ಯವಹಾರಗಳನ್ನು ಪತ್ರಿಕೆಗಳಿಗೆ ಹಾಕಿಸುತ್ತಿದ್ದೇನೆ ಅನ್ನುತ್ತಿದ್ದಾನೆ. ಅವನು ದೊಡ್ಡ ಪತ್ರಿಕೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ.'

ರುದ್ರನಾಗ ಪ್ರತಿಕ್ರಿಯೆ ನೀಡಲಿಲ್ಲ. ನಂತರ 'ಈಗ ನನ್ನನ್ನು ಏನು ಮಾಡು ಅಂತೀರ?'

ರಾಜಾರಾಯರು 'ನನ್ನ ಮಗ ಅವಳನ್ನು ಮದುವೆಯಾಗಕೂಡದು. ಅವಳು ಬದುಕಿರುವ ತನಕ ನನ್ನ ಮಗ ಅವಳನ್ನು ಮರೆಯೋಲ್ಲ. ಆದ್ದರಿಂದ ಅವಳು ಸಾಯಬೇಕು.'

ಇದನ್ನು ಕೇಳಿ ತುಂಗಮ್ಮ ಮತ್ತು ಅವಳ ಇಬ್ಬರು ಮಕ್ಕಳು ಬೆಚ್ಚಿಬಿದ್ದರು. ಒಬ್ಬರನ್ನು ಸಾಯಿಸೋದು ಅಂದರೆ ಇವರಿಗೆ ಎಷ್ಟು ಸುಲಭ.

ರಾಜಾರಾಯರು 'ಅಲ್ಲದೆ ರಾಮಯ್ಯನ ಮಗ ಬದುಕಿದ್ದರೆ ಪತ್ರಿಕೆಗಳಲ್ಲಿ ನನ್ನ ಸಂಗತಿ ಬರುತ್ತದೆ. ಆದ್ದರಿಂದ ರಾಮಯ್ಯನ ಮಗ ಮತ್ತು ಮಗಳು ಇಬ್ಬರೂ ಸಾಯಬೇಕು.'

ರುದ್ರನಾಗನಿಗೆ ವಿಪರೀತ ಸಂತೋಷವಾಗುತ್ತಿದೆ. ಆದರೆ ಅದನ್ನು ವ್ಯಕ್ತಪಡಿಸುತ್ತಿಲ್ಲ. ಎಷ್ಟು ಕೇಳಬಹುದು ಅಂತ ಚಿಂತಿಸುತ್ತಿದ್ದಾನೆ.

'ಯಾಕೆ ರುದ್ರ ಮಾತಾಡುತ್ತಿಲ್ಲ?'

ರುದ್ರನಾಗ 'ಒಂದೇ ಸಲಕ್ಕೆ ಇಬ್ಬರನ್ನು ಮುಗಿಸಬೇಕು ಅಂದರೆ ತುಂಬಾ ಶ್ರಮವಾಗುತ್ತದೆ.'

'ಶ್ರಮಕ್ಕೆ ಫಲ ಇದೆಯಲ್ಲ'

'ಅದನ್ನು ತಿಳಿಸಿ ಬಿಡಬೇಕು'

'ಒಂದು ಲಕ್ಷ ಕೊಡುತ್ತೇನೆ'

'ತುಂಬಾ ಕಡಿಮೆಯಾಯಿತು'

'ಆಯ್ತು. ಇಪ್ಪತ್ತೈದು ಸೇರಿಸಿಕೊಡುತ್ತೇನೆ. ಅದರ ಮೇಲೆ ಹೆಚ್ಚಿಗೆ ಕೇಳಬೇಡ'

ರುದ್ರನಾಗ 'ಆಗಬಹುದು. ಅವರಿಬ್ಬರ ತಲೆಯ ಕೂದಲು, ಉಗುರು...'

ರಾಜಾರಾಯರು ತಮ್ಮ ಜೇಬಿನಿಂದ ಎರಡು ಪ್ಯಾಕೆಟ್‌ಗಳನ್ನು ಹೊರ ತೆಗೆಯುತ್ತಾ 'ನೀನು ಕೇಳುತ್ತೀಯಾ ಅಂತ ನನಗೆ ಗೊತ್ತಿತ್ತು. ಅದಕ್ಕೆ ರೆಡಿ ಮಾಡಿಸಿದೆ.'

'ತುಂಬಾ ಬುದ್ಧಿವಂತರು ನೀವು' ಎಂದು ರುದ್ರನಾಗ ಹಲ್ಲು ಕಿಸಿದನು.